ಆ ಹಾಗಿದ್ದಲ್ಲಿ, ಇದರಿಂದಾಗಿ ಅನೇಕ ರೈತರಿಗೆ ತೊಂದರೆಯಾಗುತ್ತಿರುವುದು ನಿಜವೇ; ಇದನ್ನು ಪುನರ್ ಪರಿಶೀಲನೆ ಮಾಡಿ ತಹಶೀಲ್ದಾರ್‌ರವರಿಗೆ ಪುನಃ ಅಧಿಕಾರ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ರೈತರಿಗೆ ಕೆಲವು ಸಂದರ್ಭದಲ್ಲಿ ಸ್ವಲ್ಪ ತೊಂದರೆಯಾಗುತ್ತಿರಬಹುದು, ಸರ್ಕಾರವು ಎಲ್ಲಾ ತಿದ್ದುಪಡಿಗಳನ್ನು ಇತ್ಯರ್ಥಗೊಳಿಸಲು 6 ತಿಂಗಳ ವಿಶೇಷ ಕಾರ್ಯಚರಣೆಯನ್ನು ತೆಗೆದುಕೊಳ್ಳುತ್ತದೆ ಮತ್ತು ಈ ಅವಧಿಯಲ್ಲಿ ತಿದ್ದುಪಡಿ ಮಾಡುವ ಅಧಿಕಾರವನ್ನು ತಹಶೀಲ್ದಾರುಗಳಿಗೆ ವರ್ಗಾಯಿಸುವುದು ಸರ್ಕಾರದ ಪರಿಶೀಲನೆಯಲ್ಲಿದೆ.

1.	**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ**	**: (114)184**
2	**ಸದಸ್ಯರ ಹೆಸರು**	**: ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್.**
3	**ಉತ್ತರಿಸುವ ಸಚಿವರು**	**: (ಶ್ರೀ ಬಸವರಾಜ್. ಬೊಮ್ಮಾಯಿ) ಜಲಸಂಪನ್ಮೂಲ ಸಚಿವರು**

ಅ) ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ಭದ್ರಾ ಮೇಲ್ದಂಡೆ ಮತ್ತು ನೇತ್ರಾವತಿ ತಿರುವು ಯೋಜನೆಗಳ ಕಾರ್ಯಕ್ರಮಗಳ ಅನ್ವಯ ಕೋಲಾರ ತಾಲ್ಲೂಕಿನ ಕೇವಲ 19 ಕೆರೆಗಳಿಗೆ ಮಾತ್ರ ನೀರು ಬಿಡುವ ಯೋಜನೆ ಅನುಷ್ಠಾನಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಇದೇ ರೀತಿ ಕುಡಿಯುವ ನೀರಿಗಾಗಿ ತುಂಬಾ ತೊಂದರೆಯನ್ನು ಅನುಭವಿಸುತ್ತಿರುವ ಗೌರಿಬಿದನೂರು ತಾಲ್ಲೂಕಿಗೆ ಕುಡಿಯುವ ನೀರಿನ ಅನುಕೂಲತೆಯ ಸಲುವಾಗಿ ಸದರಿ ಯೋಜನೆಯನ್ನು ಗೌರಿಬಿದನೂರು ತಾಲ್ಲುಕಿಗೂ ತರುವ ಯೋಜನೆ ಸರ್ಕಾರದ ಮುಂದಿದೆಯೇ;

ಭದ್ರಾ ಮೇಲ್ದಂಡೆ ಯೋಜನೆಯನ್ನು ಶ್ರೀ ಕೆ.ಸಿ.ರೆಡ್ಡಿಯವರ ವರದಿಯ ಪ್ರಕಾರ ಸ್ಕೀಂ-ಎ ಅಡಿಯಲ್ಲಿ ಹಂಚಿಕೆಯಾಗಿರುವ ನೀರಿನ ಪ್ರಮಾಣಕ್ಕೆ ಅನುಸಾರವಾಗಿ ಕೈಗೆತ್ತಿಕೊಳ್ಳಲಾಗಿದೆ. ಈ ವರದಿಯ ಅನುಸಾರ ಅನುಷ್ಠಾನಗೊಳ್ಳುತ್ತಿರುವ ಭದ್ರಾ ಮೇಲ್ದಂಡೆ ಯೋಜನೆಯಡಿ, ಗೌರಿಬಿದನೂರು ತಾಲ್ಲೂಕಿನ ಕೆರೆಗಳಿಗೆ ನೀರು ಪೂರೈಸುವ ಯೋಜನೆಯು ಇರುವುದಿಲ್ಲ.

ಇ) ಈ ಭಾಗದ ಜನತೆಗೆ ಕುಡಿಯುವ ನೀರಿನ ಅನುಕೂಲತೆಯನ್ನು ಕಲ್ಪಿಸಲು ಈ ಭಾಗದ ಕೆರೆಗಳಿಗೆ ನೀರನ್ನು ಬಿಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಸಂಬಂಧಪಟ್ಟ ಇಲಾಖೆಯಿಂದ ಅಗತ್ಯ ಕ್ರಮ ಕೈಗೊಳ್ಳಬೇಕಾಗುತ್ತದೆ.